ಮೈಸೂರು : ಸೌಂದರ್ಯ ಪ್ರಜ್ಞೆ ಹೆಚ್ಚುತ್ತಿರುವ ಇತ್ತೀಚಿನ ದಿನಗಳಲ್ಲಿ ಬ್ಯೂಟಿಷಿಯನ್ ತರಬೇತಿ ಹೆಣ್ಣು ಮಕ್ಕಳ ಸ್ವಯಂ ಉದ್ಯೋಗಕ್ಕೆ ಅತ್ಯುತ್ತಮ ವೇದಿಕೆ ಕಲ್ಪಿಸಿಕೊಡಲಿದೆ ಎಂದು ಉನ್ನತ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಎಸ್.ಕೆ.ಅನಂತನಾರಾಯಣ ಅಭಿಪ್ರಾಯಪಟ್ಟರು.



ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಬ್ಯೂಟಿ ಅಕಾಡೆಮಿ ಸಹಯೋಗದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಮೂರು ತಿಂಗಳ 'ಬ್ಯೂಟಿಷಿಯನ್ ತರಬೇತಿ ಶಿಬಿರ'ಕ್ಕೆ ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಹುಟ್ಟಿದ ಮಗುವಿನಿಂದ ಹಿಡಿದು ಸಾಯುವವರೆಗೂ ಪ್ರತಿಯೊಬ್ಬರೂ ಸುಂದರವಾಗಿರಬೇಕು ಎಂದು ಬಯಸುವುದು ಸಹಜ. ಈ ಪ್ರಜ್ಞೆ ಬದಲಾಗುತ್ತಿರುವ ಜಗತ್ತಿನಲ್ಲಿ ಇನ್ನೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಬ್ಯೂಟಿ ಪಾರ್ಲರ್‌ಗಳ ಸಂಖ್ಯೆ ಹೆಚ್ಚುತ್ತಿದೆ. ನಿರುದ್ಯೋಗಿ ಮಹಿಳೆಯರಿಗೆ ಇದು ಉದ್ಯೋಗಾವಕಾಶ ಕಲ್ಪಿಸಿಕೊಡುತ್ತಿದೆ. ಈ ತರಬೇತಿ ಪಡೆಯುವುದರಿಂದ ಬಹಳ ಸುಲಭವಾಗಿ ತಿಂಗಳಿಗೆ 20 ರಿಂದ 30 ಸಾವಿರ ರೂ. ಸಂಪಾದಿಸಬಹುದು. ಬ್ಯಾಂಕ್ ಸಾಲ ಸೌಲಭ್ಯ ಪಡೆದು ಸ್ವಂತ ಬ್ಯೂಟಿಪಾರ್ಲರ್ ಇಡಬಹುದು ಎಂದು ಹೇಳಿದರು.

ಬ್ಯೂಟಿ ಅಕಾಡೆಮಿಯ ತರಬೇತುದಾರರಾದ ಎಸ್.ಕೆ.ಪುಷ್ಪಾಂಜಲಿ ಮಾತನಾಡಿ, ಕೇವಲ ಪದವಿ ಪಡೆಯುವುದರಿಂದ ದುಡಿಯುವ ಕೌಶಲ್ಯ ಲಭಿಸುವುದಿಲ್ಲ. ಬ್ಯೂಟಿಷಿಯನ್ ತರಬೇತಿ ಮೂಲಕ ನೀವು ದುಡಿಯುವ ಕೌಶಲ್ಯ ಪಡೆಯಬಹುದು. ತರಬೇತಿಯ ಅವಧಿಯಲ್ಲಿ ನೀವು ಎಲ್ಲ ವಿಷಯಗಳನ್ನು ಕಲಿಯಲಿದ್ದೀರಿ. ನಿಮ್ಮ ಜೀವನದುದ್ದಕ್ಕೂ ಇದು ಪ್ರಯೋಜನಕ್ಕೆ ಬರಲಿದೆ ಎಂದರು.

ರಾಸೇಯೋ ಕಾರ್ಯಕ್ರಮಾಧಿಕಾರಿ ಡಾ.ಕಂಚಿನಕೆರೆ ಗೋವಿಂದೇಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಬ್ಯೂಟಿಷಿಯನ್ ತರಬೇತಿ ಆಯೋಜಿಸಲಾಗಿದೆ. ಪದವಿ ಮುಗಿಸುವುದರೊಳಗೆ ಒಂದು ಕೌಶಲ್ಯಾಧಾರಿತ ತರಬೇತಿಯೂ ಇದ್ದರೆ ನಿರುದ್ಯೋಗ ಸಮಸ್ಯೆಯಿಂದ ಪಾರಾಗಬಹುದು. ಇದರ ಪ್ರಯೋಜನ ಪಡೆದುಕೊಂಡು ಸ್ವಾವಲಂಬಿಗಳಾಗಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ.ಅಣ್ಣೇಗೌಡ ಅವರು ಅಧ್ಯಕ್ಷತೆವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬ್ಯುಟಿಷಿಯನ್ ತರಬೇತಿಗೆ ತುಂಬಾ ಬೇಡಿಕೆಯಿದೆ. ಸುಲಭವಾಗಿ ಕೈತುಂಬ ದುಡಿಯುವ ಅವಕಾಶ ಸಿಗುತ್ತದೆ. ನೆಮ್ಮದಿಯಿಂದ ನಿಮ್ಮ ಕುಟುಂಬದ ಖರ್ಚುವೆಚ್ಚ ನಿರ್ವಹಿಸಬಹುದು. ಈ ತರಬೇತಿಯನ್ನು ನಮ್ಮ ಕಾಲೇಜಿನಲ್ಲಿಯೇ ಆಯೋಜಿಸಿರುವುದು ಹೆಮ್ಮೆಯ ಸಂಗತಿ. ವಿದ್ಯಾರ್ಥಿನಿಯರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾದ ಪ್ರೊ.ಕೆ.ಸಿ.ಸೋಮಣ್ಣ ಸ್ವಾಗತಿಸಿದರು. ರಾಸೇಯೋ ಘಟಕ–2ರ ಕಾರ್ಯಕ್ರಮಾಧಿಕಾರಿ ಪ್ರೊ.ರೇಖಾಮ್ಯಾಥ್ಯೂ ನಿರೂಪಣೆ ಮಾಡಿದರು. ವಾಣಿಜ್ಯ ವಿಭಾಗದ ಪ್ರೊ.ಬಿ.ವಿ.ತುಳಸಿ ಎಲ್ಲರನ್ನು ವಂದಿಸಿದರು. ಕುಮಾರಿ ಎಸ್.ರೇಷ್ಮ ಪ್ರಾರ್ಥನೆ ಮಾಡಿದರು.